ಕಾಮಗಾರಿಯ ಪ್ರಗತಿಗೆ ಅನುಗುಣವಾಗಿ ಹಂತ ಹಂತವಾಗಿ ಗುತ್ತಿಗೆದಾರರಿಗೆ ನೇರವಾಗಿ ಹಣ ಬಿಡುಗಡೆ ಮಾಡಲಾಗುವುದು.

ವರ್ತುಲ ರಸ್ತೆ ನಿರ್ಮಿಸುವುದು

1030 (1177) ಶ್ರೀ ಸಿದ್ದು ಸವದಿ (ತೇರದಾಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಹಾಲಿಂಗಪುರ, ತೇರದಾಳ ಮತ್ತು ರಬಕವಿ ಈ ಮೂರು ಪಟ್ಟಣಗಳಲ್ಲಿ ಸುತ್ತಲೂ ಇರುವ ಹತ್ತಾರು ಸಕ್ಕರೆ ಕಾರ್ಖಾನೆಗಳಿಂದ ಅತಿಯಾದ ವಾಹನ ದಟ್ಟಣೆಯಿಂದ ತೊಂದರೆ ಆಗಿ ವರ್ತುಲ ರಸ್ತೆಗಳ ಬೇಡಿಕೆ ಇದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಯಾವಾಗ ಈ ನಗರಗಳಿಗೆ ವರ್ತುಲ ರಸ್ತೆಯನ್ನು ಮಂಜೂರು ಮಾಡಲಾಗುವುದು;

ಇ) ರಬಕವಿ–ಬನಹಟ್ಟಿ ನಗರ ಸಭೆಯ ಎದುರು ರಸ್ತೆಯು ಎತ್ತರ ಇದ್ದು ಭಾರವಾದ ಟ್ರ್ಯಾಕ್ಟರುಗಳು ದಿನ್ನೆಯನ್ನು ಹತ್ತುವಾಗ ಬಹಳಷ್ಟು ಅಪಘಾತಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ ಅದನ್ನು ಯಾವಾಗ ಸರಿಪಡಿಸಲಾಗುವುದು?

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಮತ್ತು ಆ)

ಮಹಾಲಿಂಗಪುರ, ತೇರದಾಳ ಮತ್ತು ರಬಕವಿ ಈ ಮೂರು ಪಟ್ಟಣಗಳಲ್ಲಿನ ಸಕ್ಕರೆ ಕಾರ್ಖಾನೆಗಳಿಂದ ಅತಿಯಾದ ವಾಹನ ದಟ್ಟಣೆಯಿಂದ ತೊಂದರೆ ಆಗಿ ವರ್ತುಲ ರಸ್ತೆಗಳ ಬೇಡಿಕೆಯಾಗಿದ್ದು, ಪರಿಶೀಲಿಸಲಾಗುವುದು.

ಇ) ಮತ್ತು ಈ)

ಬಂದಿದೆ. ಪರಿಶೀಲಿಸಲಾಗುವುದು.